ಇತ್ತೀಚಿನ ದಿನಗಳಲ್ಲಿ ಭಾರತ ದೇಶದ ರೇಷ್ಮೆ ಕೃಷಿಯು ಚೈನಾ ದೇಶದಿಂದ ಆಮದಾಗುವ ರೇಷ್ಮೆಯಿಂದ ತೀವ್ರ ಪೈಪೋಟಿ ಎದುರಿಸುತ್ತಿದೆ. ಚೈನಾ ದೇಶದ ರೇಷ್ಮೆ ಒಳ್ಳೆಯ ಗುಣ ಮಟ್ಟದಿಂದ ಕೂಡಿದ್ದು ಕಡಿಮೆ ಬೆಲೆಗೆ ದೊರೆಯುತ್ತಿರುವುದೇ ಇದಕ್ಕೆ ಮುಖ್ಯ ಕಾರಣ. ಈ ನಿಟ್ಟಿನಲ್ಲಿ ಭಾರತ ದೇಶದಲ್ಲಿ ಉತ್ಪಾದಿಸುತ್ತಿರುವ ರೇಷ್ಮೆಯ ಗುಣಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದು ಅನಿವಾರ್ಯ.

ನಮ್ಮ ದೇಶದಲ್ಲಿ ರೇಷ್ಮೆ ಕೃಷಿ ಹೆಚ್ಚು ಕಾರ್ಮಿಕರ ಮೇಲೆ ಅವಲಂಬಿತವಾಗಿದ್ದು ರೇಷ್ಮೆ ಗೂಡಿನ ಉತ್ಪಾದನೆಯ ಸುಮಾರು 65–67% ವೆಚ್ಚ ಕಾರ್ಮಿಕರ ಮೇಲೆ ವಿನಿಯೋಗವಾಗುತ್ತಿದೆ. ಆದುದರಿಂದ ರೇಷ್ಮೆ ಗೂಡಿನ ಉತ್ಪಾದನಾ ವೆಚ್ಚದಲ್ಲಿ ಕಾರ್ಮಿಕರ ಮೇಲಾಗುವ ವೆಚ್ಚ ತಗ್ಗಿಸುವುದು ಅತ್ಯಾವಶ್ಯಕ.

## ರೇಷ್ಮೆ ಕೃಷಿಯಲ್ಲಿ ಯಾಂತ್ರೀಕರಣದ ಅವಶ್ಯಕತೆ

ರೇಷ್ಮೆ ಕೃಷಿಯಲ್ಲಿ ಯಾತ್ರೀಕರಣ ಈ ಕೆಳಕಂಡ ಕಾರಣಗಳಿಂದಾಗಿ ಅತ್ಯಾವಶ್ಯಕವಾಗಿದೆ.

- ಭೂಮಿಯ ಮತ್ತು ಮಣ್ಣಿನ ಫಲವತ್ತತೆ, ಕಾರ್ಮಿಕರ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು.
- ನಿಗದಿತ ಅವಧಿಯಲ್ಲಿ ಹಿಪ್ಪುನೇರಳೆ ತೋಟ ಮತ್ತು ರೇಷ್ಮೆ ಹುಳು ಸಾಕಾಣಿಕೆ ಕಾರ್ಯಕ್ರಮಗಳ ನಿರ್ವಹಣೆ .
- ರೇಷ್ಮೆ ಗೂಡು ಉತ್ಪಾದನೆಯಲ್ಲಿ ಹೆಚ್ಚಿನ ನೈಪುಣ್ಯತೆ ಹೊಂದುವುದು.
- ರೇಷ್ಮೆ ಕೃಷಿಯಲ್ಲಿರುವ ಕಾರ್ಮಿಕರ ದೈಹಿಕ ತೊಂದರೆಗಳ ನಿವಾರಣೆ / ಸರಳೀಕರಣ.
- ರೇಷ್ಮೆ ಗೂಡಿನ ಉತ್ಪಾದನಾ ವೆಚ್ಚದ ಕಡಿತ.
- ರೇಷ್ಮೆ ಗೂಡಿನ ಗುಣಮಟ್ಟದಲ್ಲಿ ಸುಧಾರಣೆ

## ಹಿಪ್ಪುನೇರಳೆ ಬೇಸಾಯದಲ್ಲಿ ಯಾಂತ್ರೀಕರಣ

ಹಿಪ್ಪುನೇರಳೆ ಬೇಸಾಯ ರೇಷ್ಮೆ ಕೃಷಿಯ ಅತೀ ಮುಖ್ಯ ಅಂಗ. ಉತ್ತಮ ಗುಣಮಟ್ಟದ ಎಲೆ ಉತ್ತಮ ಗುಣಮಟ್ಟದ ರೇಷ್ಮೆ ಗೂಡು ಉತ್ಪಾದನೆಗೆ ಅತೀ ಅವಶ್ಯಕ. ಇತ್ತೀಚಿನ ವರ್ಷಗಳಲ್ಲಿ ಕಾರ್ಮಿಕರ ಅಸಭ್ಯತೆ ಮತ್ತು ಹೆಚ್ಚಿನ ಕೂಲಿ ಹಾಗೂ ನೀರು, ಗೊಬ್ಬರಗಳ ಹೆಚ್ಚಿದ ವೆಚ್ಚದಿಂದ ಹಿಪ್ಪುನೇರಳೆ ಸೊಪ್ಪಿನ ಉತ್ಪಾದನಾ ವೆಚ್ಚ ಗಣನೀಯವಾಗಿ ಏರಿಕೆ ಕಂಡಿದೆ. ರೇಷ್ಮೆ ಗೂಡಿನ ಉತ್ಪಾದನೆಯ ಸುಮಾರು 60–70% ಖರ್ಚು ಕೇವಲ ಕಾರ್ಮಿಕರ ಮೇಲೆ ವ್ಯಯವಾಗುತ್ತಿದೆ. ಆದುದರಿಂದ ಹಿಪ್ಪುನೇರಳೆ ಸೊಪ್ಪು ಉತ್ಪಾದನೆಗೆ ತಗಲುವ ಖರ್ಚನ್ನು ತಗ್ಗಿಸುವುದು ಅನಿವಾರ್ಯ. ಈ ನಿಟ್ಟಿನಲ್ಲಿ ಹಿಪ್ಪುನೇರಳೆ ಬೇಸಾಯದಲ್ಲಿ ಯಾಂತ್ರೀಕರಣದ ಬಳಕೆಯಿಂದ ಮುಖ್ಯವಾಗಿ ಭೂಮಿ ಹದ ಮಾಡಲು, ಕಡ್ಡಿ ಕತ್ತರಿಸಲು, ಅಂತರ ಬೇಸಾಯ, ರಾಸಾಯನಿಕಗಳ ಸಿಂಪಡನೆ, ಕಾಂಡ ಕತ್ತರಿಸಲು, ಇತ್ಯಾದಿಗಳನ್ನು ಯಾಂತ್ರೀಕರಣಗೊಳಿಸಿ ಸೊಪ್ಪಿನ ಉತ್ಪಾದನಾ ವೆಚ್ಚವನ್ನು ಗಣನೀಯವಾಗಿ ತಗ್ಗಿಸಬಹುದು.

## ಹಿಪ್ಪುನೇರಳೆ ತೋಟ ಅಭಿವೃದ್ಧಿ ಪಡಿಸಲು ಭೂಮಿ ಸಿದ್ಧತೆ

ಹಿಪ್ಪುನೇರಳೆಯು ಬಹುವಾರ್ಷಿಕ ಬೆಳೆಯಾಗಿದ್ದು, ಗಿಡ ನೆಟ್ಟ ನಂತರ 12–15 ವರ್ಷಗಳ ಕಾಲ ನಿರ್ವಹಿಸಬಹುದು. ಆದುದರಿಂದ ಹಿಪ್ಪುನೇರಳೆ ನಾಟಿ ಮಾಡುವ ಮುನ್ನ ಭೂಮಿಯನ್ನು ಚೆನ್ನಾಗಿ ಹದ ಮಾಡಿಕೊಳ್ಳಬೇಕು. ಹೊಸ ತೋಟ ಅಭಿವೃದ್ಧಿ ಪಡಿಸುವಾಗ ಟ್ರ್ಯಾಕ್ಟರ್ ಬಳಸಿ ಭೂಮಿಯ ಸಿದ್ಧತೆಯನ್ನು ಕಡಿಮೆ ಕಾಲದಲ್ಲಿ ಹಾಗು ಕಡಿಮೆ ಖರ್ಚಿನಲ್ಲಿ ಮಾಡಬಹುದು. ಆಳವಾಗಿ ಉಳುಮೆ ಮಾಡಲು ಮತ್ತು ಭೂಮಿ ಸಮತಟ್ಟು ಮಾಡಲು ಅನೇಕ ಉಪಕರಣಗಳು ಲಭ್ಯವಿವೆ. ಚೆನ್ನಾಗಿ ಹದ ಮಾಡಿದ ಭೂಮಿಯಲ್ಲಿ ಹಿಪ್ಪುನೇರಳೆ ಗಿಡಗಳು ಬಹಳ ಬೇಗ ಅಭಿವೃದ್ಧಿಗೊಳ್ಳುತ್ತವೆ.




## ಹಿ




ಹಿಪ್ಪು ನೇರಳೆ ಗಿಡಗಳನ್ನು, ಕಾಂಡಗಳ ತುಂಡುಗಳನ್ನು ನಾಟಿ ಮಾಡಿ ಅಭಿವೃದ್ಧಿ ಪಡಿಸಲಾಗುವುದು. ಬಿತ್ತನೆ ಕಡ್ಡಿಗಳ ತಯಾರಿಕೆಗೆ ಕಾಮಿಕರನ್ನು ನಿಯೋಜಿಸಿದರೆ ಒಬ್ಬ ಕಾರ್ಮಿಕ ಒಂದು ದಿನಕ್ಕೆ ಸುಮಾರು 1500–2000 ಕಡ್ಡಿಗಳನ್ನು ಕತ್ತರಿಸಬಹುದಾಗಿದೆ. ಇದೇ ಕಾರ್ಯವನ್ನು ಸಿ.ಎಸ್.ಆರ್.ಟಿ.ಐ., ಮೈಸೂರು ಅಭಿವೃದ್ಧಿಪಡಿಸಿರುವ ಹಿಪ್ಪು ನೇರಳೆ ಕಡ್ಡಿ ಕತ್ತರಿಸುವ ಯಂತ್ರವು ಗಂಟೆಗೆ ಸುಮಾರು 1400–1500 ಕಡ್ಡಿಗಳನ್ನು ಕತ್ತರಿಸುತ್ತದೆ. ಇದರಿಂದ ಸವುಂಯು ವುತ್ತು ಖರ್ಚಿನಲ್ಲಿ ಉಳಿತಾಯವಾಗುತ್ತದೆ.

## ಹಿಪ್ಪು ನೇರಳೆ ತೋಟದಲ್ಲಿ ಅಂತರ ಬೇಸಾಯದ ಯಾಂತ್ರೀಕರಣ

ಹಿಪ್ಪು ನೇರಳೆ ತೋಟದಲ್ಲಿ ಅಂತರ ಬೇಸಾಯ ಯಾಂತ್ರೀಕರಣ ಅಳವಡಿಸಲು ಸಿ.ಎಸ್.ಆರ್.ಟಿ.ಐ., ಮೈಸೂರು ಸೂಕ್ತ ಗಿಡಗಳ ನಡುವಿನ ಅಂತರದಲ್ಲಿ ತೋಟ ಅಭಿವೃದ್ಧಿಪಡಿಸುವ ವಿಧಾನವನ್ನು ಅಭಿವೃದ್ಧಿಪಡಿಸಿದೆ. ಅವುಗಳೆಂದರೆ ಜೋಡಿಸಾಲು ವಿಧಾನ ಮತ್ತು 3 ಮೀ. ವಿಧಾನ ಇವುಗಳ ವಿನ್ಯಾಸವನ್ನು ಈ ಕೆಳಗಿನ ಚಿತ್ರದಲ್ಲಿ ಕಾಣಬಹುದು. ಇದು ತೋಟದ ನಿರ್ವಹಣೆಯಲ್ಲಿ ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್ ಬಳಸಿ ತೋಟ ನಿರ್ವಹಣಾ ವೆಚ್ಚವನ್ನು ತಗ್ಗಿಸಿರುವುದರ ಜೊತೆಗೆ ನಿರ್ವಹಣೆಯನ್ನು ಕಡಿಮೆ ಅವಧಿಯಲ್ಲಿ ಮುಗಿಸಬಹುದು.



All Dimensions in cm



All Dimensions in cm



## ತೋಟದಲ್ಲಿ ರಾಸಾಯನಿಕಗಳ ಸಿಂಪಡಣೆಯ ಯಾಂತ್ರೀಕರಣ

ಉತ್ತಮ ಗುಣಮಟ್ಟದ ಎಲೆಯನ್ನು ಉತ್ಪಾದಿಸಲು ತೋಟಕ್ಕೆ ಬರುವ ಅನೇಕ ರೋಗ ಮತ್ತು ಕೀಟಗಳ ಹಾವಳಿಯನ್ನು ಆರಂಭದಲ್ಲಿ ನಿಯಂತ್ರಿಸುವುದು ಅತ್ಯವಶ್ಯಕ. ಇದಕ್ಕೆ ಅವಶ್ಯಕವಾದ ಸೂಕ್ತ ರಾಸಾಯನಿಕ ಸಿಂಪಡಕಗಳು (ಸಿ.ಎಸ್.ಆರ್.ಟಿ.ಐ., ಮೈಸೂರು, ಟಿ.ಎನ್.ಎ.ಯು ಮತ್ತು ಆಸ್ಪೀ ಸಿಂಪರಕಗಳು) ಲಭ್ಯ.



## ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಯಾಂತ್ರೀಕರಣ

ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಕಾರ್ಮಿಕರ ಮೇಲಿನ ಅವಲಂಬನೆ ಅತೀ ಹೆಚ್ಚಿದೆ. ಇದರಿಂದ ಸುಮಾರು 40% ಹುಳು ಸಾಕಾಣಿಕೆ ಖರ್ಚು ಕಾರ್ಮಿಕರ ಮೇಲೆ, ಅದರಲ್ಲೂ ಮುಖ್ಯವಾಗಿ, ಸೋಂಕು ನಿವಾರಣೆ, ಎಲೆ ಕತ್ತರಿಸುವುದು. ಸೊಪ್ಪು ಹಾಕುವುದು. ಹಣ್ಣುಹುಳು ಬೇರ್ಪಡಿಸುವುದು. ಗೂಡು ಬಿಡಿಸುವುದು ಮತ್ತು ವಿಂಗಡಿಸುವುದು ಇತ್ಯಾದಿಗಳ ಮೇಲೆ ವಿನಿಯೋಗವಾಗುತ್ತದೆ.

## ರೇಷ್ಮೆ ಹುಳು ಸಾಕಾಣಿಕೆ ಮನೆ ಸೋಂಕು ನಿವಾರಣೆ

ರೇಷ್ಮೆ ಹುಳು ಸಾಕಾಣಿಕೆ ಮನೆಯ ಸಮರ್ಪಕ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆ ಒಂದು ಅತೀ ಮುಖ್ಯವಾದ ಅಂಗ. ಇದು ಉತ್ತಮ ಗೂಡಿನ ಇಳುವರಿ ಪಡೆಯಲು ನಾಂದಿ. ಶಕ್ತಿಶಾಲಿ ಸಿಂಪರಕಗಳ ಬಳಕೆ ಸಮರ್ಪಕ ಸೋಂಕು ನಿವಾರಣೆಗೆ ಅತೀ ಅವಶ್ಯಕ. ಇದನ್ನು ಮನಗಂಡಿರುವ ರೈತರು ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಮತ್ತು ಶಕ್ತಿಯುತ ಸಿಂಪರಕಗಳನ್ನು ಹುಳುಸಾಕಾಣೆ ಮನೆ ಮತ್ತು ಉಪಕರಣಗಳ ಸೋಂಕು ನಿವಾರಣೆಗೆ ಬಳಸುತ್ತಿದ್ದಾರೆ. ಸಿ.ಎಸ್.ಆರ್.ಟಿ.ಐ., ಮೈಸೂರು ಅಭಿವೃದ್ಧಿಪಡಿಸಿರುವ ಸಿಂಪರಕ ಮತ್ತು ಫ್ಲೇಮ್‌ಗನ್ ರೇಷ್ಮೆ ಹುಳು ಮತ್ತು ಉಪಕರಣಗಳ ಸೋಂಕು ನಿವಾರಣೆಗೆ ಅತ್ಯಂತ ಅನುಕೂಲಕರವಾಗಿದೆ.



## ಚಾಕಿ ಎಲೆ ಕತ್ತರಿಸುವ ಯಂತ್ರ

ಚಾಕಿ ಹುಳುಗಳಿಗೆ ಎಳೆಯ ರಸಭರಿತ ಸೊಪ್ಪನ್ನು ಕತ್ತರಿಸಿ ನೀಡುವುದು ಅತ್ಯವಶ್ಯಕ. ಸಣ್ಣ ಪ್ರಮಾಣದಲ್ಲಿ ಚಾಕಿ ಸಾಕಾಣಿಕೆ ಮಾಡುವವರು ಎಲೆಗಳು ಹಂತಕ್ಕನುಸಾರವಾಗಿ ಸಣ್ಣಗೆ ಕತ್ತರಿಸಲು ಆಳುಗಳ ಮೇಲೆ ಅವಲಂಬಿಸಿರುತ್ತಾರೆ. ಆದರೆ ದೊಡ್ಡ ಪ್ರಮಾಣದ ಚಾಕಿ ಕೇಂದ್ರಗಳಲ್ಲಿ ಕಡಿಮೆ ಸಮಯದಲ್ಲಿ ಹೆಚ್ಚು ಎಲೆ ಕತ್ತರಿಸಲು ಯಂತ್ರದ ಬಳಕೆ ಅವಶ್ಯಕ. ಸಿ.ಎಸ್.ಆರ್.ಟಿ.ಐ., ಮೈಸೂರು ಅಭಿವೃದ್ಧಿಪಡಿಸಿರುವ ಚಾಕಿ ಎಲೆ ಕತ್ತರಿಸುವ ಯಂತ್ರ ಗಂಟೆಗೆ ಸುಮಾರು 225–250 ಕೆ.ಜಿ. ಎಲೆಯನ್ನು ಬೇಕಾದ ಅಳತೆಗೆ ಕತ್ತರಿಸಲು ಬಹು ಉಪಯೋಗಿ.

## ಹಣ್ಣು ಹುಳು ವಿಂಗಡಕ



ಈ ಯಂತ್ರವು ಹಣ್ಣು ಹುಳುಗಳನ್ನು ಹಿಪ್ಪುನೇರಳೆ ಕಡ್ಡಿಗಳಿಂದ ಬೇರ್ಪಡಿಸಲು ಉಪಯೋಗಕಾರಿ. ಈ ಯಂತ್ರದ ಸಹಾಯದಿಂದ ಗಂಟೆಯೊಂದಕ್ಕೆ 100 ಮೊಟ್ಟೆ (40,000–45,000) ಹುಳುಗಳನ್ನು ಗೂಡು ಕಟ್ಟಲು ಬಿಡಬಹುದು. ಹಾಸಿಗೆಯಲ್ಲಿ ಹುಳುಗಳು ಗೂಡು ಕಟ್ಟುವುದನ್ನು ತಪ್ಪಿಸಬಹುದು ಹಾಗೂ ಹಣ್ಣು ಹುಳು ಆಯಲು ಕಾರ್ಮಿಕರ ಮೇಲಿನ ಅವಲಂಬನೆ ತಪ್ಪಿಸಬಹುದು.

## ಗೂಡಿನ ಗುಂಜು ಬಿಡಿಸುವುದು

ರೇಷ್ಮೆ ಗೂಡಿನಿಂದ ನೂಲು ತೆಗೆಯುವ ಮೊದಲು ಗೂಡಿನ ಹೊರಪದರ ತೆಗೆಯುವುದು ಅವಶ್ಯಕ. ಇದನ್ನು ಸಾಧಾರಣವಾಗಿ ಕೈಯಿಂದ ತೆಗೆಯಲಾಗುತ್ತಿದ್ದು ಹೆಚ್ಚು ಸಮಯ ಮತ್ತು ಆಳುಗಳು ಬೇಕಾಗುತ್ತದೆ. ಸಿ.ಎಸ್.ಆರ್.ಟಿ.ಐ., ಮೈಸೂರು ಸಂಸ್ಥೆಯು ಇದಕ್ಕಾಗಿ ಗೂಡಿನ ಗುಂಜು ಬಿಡಿಸುವ ಯಂತ್ರವನ್ನು ಅಭಿವೃದ್ಧಿಪಡಿಸಿದೆ. ಸಣ್ಣ ಪ್ರಮಾಣದ ರೇಷ್ಮೆ ಬೆಳೆಗಾರರ ಅನುಕೂಲಕ್ಕಾಗಿ ಕೈಯಿಂದ ತಿರುಗಿಸುವ ಹಾಗೂ ದೊಡ್ಡ ಪ್ರಮಾಣದ ಬೆಳೆಗಾರರಿಗಾಗಿ ವಿದ್ಯುತ್ ಚಾಲಿತ ಗುಂಜು ಬಿಡಿಸುವ ಯಂತ್ರ ಲಭ್ಯವಿದೆ. ಈ ಯಂತ್ರಗಳನ್ನು ಬಳಸಿ ಗೂಡಿನ ಗುಂಜನ್ನು ಅತೀ ವೇಗವಾಗಿ ಬಿಡಿಸಬಹುದು ಮತ್ತು ಇದು ಹೆಚ್ಚು ಧಾರಣೆ ಪಡೆಯಲು ಅನುಕೂಲ.





## ಹುಳು ಸಾಕುವ ಪ್ಲಾಸ್ಟಿಕ್ ತಟ್ಟೆ ಶುದ್ಧೀಕರಿಸುವ ಯಂತ್ರ



ದೊಡ್ಡ ಪ್ರಮಾಣದ ಚಾಕಿ ಸಾಕಾಣಿಕೆ ಕೇಂದ್ರಗಳಲ್ಲಿ ಹುಳು ಸಾಕುವ ಪ್ಲಾಸ್ಟಿಕ್ ತಟ್ಟೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ಮತ್ತು ಅತೀ ಶೀಘ್ರವಾಗಿ ಶುಚಿ ಮಾಡುವ ಅವಶ್ಯಕತೆ ಇರುತ್ತದೆ. ಇದಕ್ಕೆ ಪ್ಲಾಸ್ಟಿಕ್ ತಟ್ಟೆ ಶುಚಿಗೊಳಿಸುವ ಯಂತ್ರ ಬಹು ಉಪಕಾರಿ. ಇದರ ಸಹಾಯದಿಂದ 1 ಗಂಟೆಗೆ ಸುಮಾರು 60–70 ತಟ್ಟೆಗಳನ್ನು ಶುಚಿಗೊಳಿಸಬಹುದು.

## ಪ್ಲಾಸ್ಟಿಕ್ ಚಂದ್ರಿಕೆ ಜೋಡಿಸುವ ಸಾಧನ



ರೇಷ್ಮೆ ಬೆಳೆ ಮುಗಿದ ಮೇಲೆ ಪ್ಲಾಸ್ಟಿಕ್ ಚಂದ್ರಿಕೆಗಳನ್ನು ಸರಿಯಾಗಿ ಜೋಡಿಸಿ ಕಟ್ಟಿಡಲು ಅನುಕೂಲವಾಗುವಂತೆ ಸಿ.ಎಸ್.ಆರ್.ಟಿ.ಐ., ಮೈಸೂರು ಒಂದು ಸುಲಭ ಸಾಧನವನ್ನು ಅಭಿವೃದ್ಧಿ ಪಡಿಸಿದೆ ಇದರ ಸಹಾಯದಿಂದ ಪ್ಲಾಸ್ಟಿಕ್ ಚಂದ್ರಿಕೆಗಳನ್ನು ಸುಲಭವಾಗಿ ಮತ್ತು ಶೀಘ್ರವಾಗಿ ಸರಿಯಾಗಿ ಜೋಡಿಸಿ ಕಟ್ಟಿಡಬಹುದು.

## ರೇಷ್ಮೆ ಕೃಷಿ ಯಂತ್ರ ಮತ್ತು ಸಾಧನಗಳ ಸರಕುದಾರರು

1. ಕಕೂನ್ ಹಾರ್ವೆಸ್ಟರ್, ಚಾಕಿ ಎಲೆ ಕತ್ತರಿಸುವ ಯಂತ್ರ, ಹೀಟರ್, ಹ್ಯುಮಿಡಿಫೈಯರ್, ಗುಂಜು ಬಿಡಿಸುವ ಯಂತ್ರ – ರಾಜ್ ಎಂಟರ್ ಪ್ರೈಸಸ್, 1265, ಹೆಬ್ಬಾಳ್, ಸ್ಟೇಜ್–1, ಮೈಸೂರು–570 016.
2. ಫ್ಲೇಮ್ ಗನ್/ಸೆರಿ ಟಾರ್ಚ್–ಕಿರಣ್ ಕಾರ್ಪೋರೇಶನ್, 2–ಬಿ, ದೇವರಾಜ ಅರಸ್ ರಸ್ತೆ, ಮೈಸೂರು–570 001, ಫೋನ್ – 0821–2439863
3. ಪವರ್ ಸ್ಪ್ರೇಯರ್–ಶ್ರೀ ಬಾಲಾಜಿ ಏಜೆನ್ಸೀಸ್, 153/1, ರಮಾ ವಿಲಾಸ ರಸ್ತೆ, ಮೈಸೂರು–570 024 ಫೋನ್ – 9886760265
4. ರೋಟರಿ ಮೌಂಟೇಜ್, ಪಿ.ವಿ.ಸಿ. ಸ್ಟಾಂಡ್, ಇನ್ಕುಬೇಷನ್ ಫ್ರೇಮ್‌ಕಾನ್ಸೆಪ್ಟ್ ಕಾಂಪೋನೆಂಟ್, 18, 8ನೇ ಮೈನ್, ಯಾದವಗಿರಿ, ಮೈಸೂರು 570 020, ಫೋನ್ : 9845286914
5. ರೇಷ್ಮೆ ಮೌಂಟೇಜ್, ಕತ್ತರಿಸುವ ಯಂತ್ರ, ಹಿಪ್ಪುನೇರಳೆ ಕಡ್ಡಿ ಕತ್ತರಿಸುವ ಯಂತ್ರ, ಚಾಕಿ ಡಸ್ಟರ್, ಹುಳು ಹಾಕುವ ಪ್ಲಾಸ್ಟಿಕ್ ತಟ್ಟೆ, ತಟ್ಟೆ ಶುದ್ಧೀಕರಿಸುವ ಯಂತ್ರ– ನಿರ್ದೇಶಕರು, ಸಿ.ಎಸ್.ಆರ್.ಟಿ.ಐ, ಮೈಸೂರು 570 008

ಪಠ್ಯ:
**ಡಾ. ಸತೀಶ್‌ವರ್ಮ**

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ
**ನಿರ್ದೇಶಕರು**
**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ, ಭಾರತ ಸರ್ಕಾರ,
ಶ್ರೀರಾಂಪುರ, ಮೈಸೂರು 570 008
ದೂರವಾಣಿ: 0821–2362757, 2362406 ಫ್ಯಾಕ್ಸ್: 0821–2362845
ವೆಬ್: www.csrtimys.res.in ಇ–ಮೇಲ್: csrtimys.csb@nic.in

Copies: 500 February 2019 Design & Layout: J. Justin Kumar

Technical Bulletin No. 33 [Kan]

# ರೇಷ್ಮೆ ಕೃಷಿಯಲ್ಲಿ ಯಾಂತ್ರೀಕರಣ



**ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆ**
(ISO 9001: 2015 ಪ್ರಮಾಣೀಕೃತ)
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಶ್ರೀರಾಂಪುರ, ಮೈಸೂರು – 570008